**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್  207/2020**

ಪಿ  ಡಬ್ಲ್ಯೂ-1

**ದಿನಾಂಕ 22-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಸಿ ಡಿ ಎಮ್  ಪ್ರತಿವಾದಿ ಪರ ವಕೀಲರುಃ**

ನನ್ನ ಮದುವೆಯು ದಿಃ 22-05-1991 ರಂದು  ರಾಜೀವ ಗಾಂಧಿ ಮೃತಪಟ್ಟ ದಿನ ಜರುಗಿರುತ್ತದೆ. ನಮ್ಮ ವಿವಾಹವು  ಕೆ ಆರ್ ನಗರದ ಶಿವಾನುಭವ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ ಎಂದರೆ ಸರಿ. ನಮ್ಮ ಮದುವೆಯ ಮಾತುಕತೆಯು ಸೌತನಹಳ್ಳಿ ಗ್ರಾಮದಲ್ಲಿ ಆಗಿರುತ್ತದೆ ಎಂದರೆ ಸರಿ. ನಮ್ಮ ಮದುವೆಯನ್ನು ನಮ್ಮತಂದೆ ತಾಯಿ ಸಹೋದರರು ಸೇರಿಕೊಂಡು ಮಾಡಿರುತ್ತಾರೆ ಎಂದರೆ ಸರಿ.

**2**.     ದಾವಾ 1  ಮತ್ತು 3 ನೇ ಸ್ವತ್ತು ನೀರಾವರಿ ಜಮೀನು ಎಂದರೆ ಸರಿ.  ಅದೇ ರೀತಿ ದಾವಾ 2 ನೇ ಸ್ವತ್ತಿನಲ್ಲಿ ತೆಂಗು ಅಡಿಕೆ ಇರುತ್ತದೆ. ದಾವಾ 4 ನೇ ಸ್ವತ್ತು  ಖುಷ್ಕಿ ಜಮೀನು ಎಂದರೆ ಸರಿ. ದಾವಾ 5 ನೇ ಸ್ವತ್ತು ಸೌತನಹಳ್ಳಿ ಗ್ರಾಮದಲ್ಲಿದೆ ಎಂದರೆ ಸರಿ. ಪ್ರಸ್ತುತ ಸದರಿ ಮನೆಗೆ ಸೀಟ್ ನ್ನು ಹಾಕಿರುತ್ತಾರೆ. ಸದರಿ ಸ್ವತ್ತಿಗೆ ಸಾರ್ವಜನಿಕರ  ಜಾಗ ಎಂದು ದಾವಾ ಸಂಖ್ಯೆ 107/19 ನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯ ವಿಚಾರಣೆ ಇದೇ ತಿಂಗಳು ಇದೇ ಎಂದರೆ ಸರಿ.

**3**.     ದಾವಾ 5 ನೇ ಸ್ವತ್ತು ನಮ್ಮ ತಂದೆಗೆ ಸೇರಿದ ಎಂದು ನಾನು ಯಾವುದೇ ಪ್ರತಿರಕ್ಷ ತೆಗೆದುಕೂಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆದೇಶ ವಾಗಿದೆ ಎಂದು ತಿಳಿಸಿರುತ್ತಾರೆ. ದಿನಾಂಕ ನನಗೆ ನೆನಪಿರುವುದಿಲ್ಲ. ಸದರಿ ದಾವೆಯು ಇನ್ನು ವಿಚಾರಣೆ ಹಂತದಲ್ಲಿದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಗದ್ದೆಯ ಜಮೀನು ಪ್ರತಿ ಎಕರೆಗೆ 3 ರಿಂದ 4 ಲಕ್ಷ ಬೆಲೆಬಾಳುತ್ತದೆ.ೃ

4. ದಾವಾ 2 ನೇ ಸ್ವತ್ತಿನಲ್ಲಿ 50 ಅಡಿಕೆ ಮರ ಮತ್ತು 100 ತೆಂಗಿನ ಮರಗಳು ಇವೆ. ಸದರಿ ಜಮೀನು 5 ಲಕ್ಷ ಬೆಲೆಬಾಳುತ್ತದೆ. ದಾವಾ 4 ನೇ ಸ್ವತ್ತು 2 ಲಕ್ಷ ಬೆಲೆಬಾಳುತ್ತದೆ. ದಾವಾ 5 ಮತ್ತು 6 ನೇ ಸ್ವತ್ತುಗಳು 1 ಲಕ್ಷ ಬೆಲೆ ಬಾಳುತ್ತದೆ. ದಾವಾ 1 ಮತ್ತು 3 ನೇ ಸ್ವತ್ತುಗಳು ಉಪ ನೋಂದಣಾಧಿಕಾರಿಗಳ ಮೌಲ್ಯ ಮಾಪನದಂತೆ ದಾವೆಯನ್ನು ಸಲ್ಲಿಸುವ ಕಾಲದಲ್ಲಿ ಎಕರೆ 6 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಮಾರುಕಟ್ಟೆಯ ಬೆಲೆ 20 ಲಕ್ಷ ಎಕರೆ ಬೆಲೆ ಬಾಳುತ್ತದೆ.

**5.** ದಾವಾ 2 ನೇ ಸ್ವತ್ತು ಉಪ ನೋಂದಣಾಧಿಕಾರಿಗಳ ಮೌಲ್ಯ ಮಾಪನದಂತೆ ದಾವೆಯನ್ನು ಸಲ್ಲಿಸುವ ಕಾಲದಲ್ಲಿ ಎಕರೆ 8 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ದಾವಾ 4 ನೇ ಸ್ವತ್ತು ಉಪ ನೋಂದಣಾಧಿಕಾರಿಗಳ ಮೌಲ್ಯ ಮಾಪನದಂತೆ ದಾವೆಯನ್ನು ಸಲ್ಲಿಸುವ ಕಾಲದಲ್ಲಿ ಎಕರೆ 5 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ದಾವಾ 5 ನೇ ಸ್ವತ್ತು ಉಪ ನೋಂದಣಾಧಿಕಾರಿಗಳ ಮೌಲ್ಯ ಮಾಪನದಂತೆ ದಾವೆಯನ್ನು ಸಲ್ಲಿಸುವ ಕಾಲದಲ್ಲಿ 4-5 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ.

**6.** ಹಳೆಯ ಸೌತನಹಳ್ಳಿ ಮುಳುಗಳೆಯಾದ ನಂತರ ಸದರಿ ಜಾಗದಲ್ಲಿ ಹೊಸ ಸೌತನಹಳ್ಳಿ ನಿರ್ಮಾಣವಾಗಿರುವ ಬಗ್ಗೆ ನಮ್ಮ ಅಜ್ಜಿ ತಿಳಿಸಿರುತ್ತಾರೆ. ಹಳೆ ಸೌತನಹಳ್ಳಿ ಗ್ರಾಮಸ್ಥರ ಜಮೀನುಗಳು ಮುಳುಗಡೆಯಾಗಿವೆ ಎಂದರೆ ಸರಿ. ನಿಪಿ-1 ರಿಂದ 3 ನಲ್ಲಿ ನಮ್ಮ ತಂದೆ ಎಸ್ ಪಿ ಶಿವಣ್ಣ ರವರ ಹೆಸರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸಹೋದರರ ಹೆಸರಿನಲ್ಲಿ ಇದೆ. ನಮ್ಮ ತಂದೆಯ ಮುಖಾಂತರ ನಮ್ಮ ಸಹೋದರರಿಗೆ ಬಂದಿರುತ್ತದೆ.

7. ನಮ್ಮ ತಂದೆಯ ಹೆಸರಿನಲ್ಲಿರುವ ಯಾವುದೇ ದಾಖಲೆಗಳನು ನೀಡಿರುವುದಿಲ್ಲ. ನಮ್ಮ ತಾತನ ಹೆಸರು ತಮ್ಮಯ್ಯ. ನಮ್ಮ ತಾತನ ಹೆಸರಿನಲ್ಲಿ ಸದರಿ ದಾವಾ ಸ್ವತ್ತು ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ನಮ್ಮ ತಂದೆ ಸುಮಾರು 5-6 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನಮ್ಮ ತಂದೆ 2012 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ.

8. ನಮ್ಮ ತಂದೆಯು ಜೀವಂತವಾಗಿದ್ದಾಗಲೇ ಎಮ್ ಆರ್ ಆದೇಶದ ಮೇರೆಗೆ ನಮ್ಮ ಸಹೋದರರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿ ದಾವಾಸ್ವತ್ತುಗಳು ಎಂದಿಗೂ ಸಹ ನಮ್ಮ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹೊಸಸೌತನಹಳ್ಳಿ ಗ್ರಾಮ ನಿರ್ಮಾಣವಾದಾಗ ನಮ್ಮ ಸಹೋದರರು ಅವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

9. ಸದರಿ ದಾವಾ ಸ್ವತ್ತುಗಳ ಕುರಿತು ನಾನು ಮತ್ತು ಅವುಗಳ ವ್ಯವಹಾರಗಳ ಕುರಿತು ನನಗೆ ತಿಳಿದಿದೆ. 1991-92 ರಿಂದ ನಮ್ಮ ಸಹೋದರರು ಸದರಿ ದಾವಾ ಸ್ವತ್ತುಗಳ ಮೇಲೆ ಭೋಗ್ಯ ಮತ್ತು ಅಡಮಾನ ಮಾಡಿ ಅವುಗಳ ಮೇಲೆ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿ. 30 ವರ್ಷದಿಂದ ದಾವಾ ಸ್ವತ್ತುಗಳಾದ 1 ರಿಂದ 3 ನಮ್ಮ ತಂದೆಯ ಹೆಸರಿನಲ್ಲಿ ಇರಲಿಲ್ಲಾ ಎಂದರೆ ಸರಿಯಲ್ಲ.

10. ನಾನು ನಮ್ಮ ತಂದೆಯ ಕುಟುಂಬದ ವ್ಯವಹಾರದ ಬಗ್ಗೆ ಸರಿಯಾಗಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ನನ್ನ ಇಬ್ಬರು ಮಕ್ಕಳ ಬಾಣಂತನವನ್ನು ಸೌತನಹಳ್ಳಿಯಲ್ಲಿ ತಾಯಿಯ ಆರೈಕೆಯಲ್ಲಿ ನಡೆದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡ ಹಣವನ್ನು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ.

**11.** ನನ್ನ ಇಬ್ಬರು ಮಕ್ಕಳಲ್ಲಿ ಒಬ್ಬರು ಕಾನ್ಸಟೇಬಲ್ ಆಗಿ ಮತ್ತು ಇನ್ನೊಬರು ದಾರಾವಹಿಯಲ್ಲಿ ನಟನಾಗಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ. ನಾನು 9 ನೇ ತರಗತಿಯವರೆಗೆ ಓದಿದ್ದು. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸದರಿ ದಾವೆಯನ್ನು ಸಲ್ಲಿಸುವ ಕಾಲದಲ್ಲಿ ದಾವಾ ಸ್ವತ್ತುಗಳ ಒಟ್ಟು ಬೆಲೆ 30 ಲಕ್ಷಕ್ಕೂ ಮೇಲ್ಪಟ್ಟು ಇರುವುದರಿಂದ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ.ೃ

12. ನಾನು ಸಲ್ಲಿಸಿರುವ ವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಭಾಗಾವನ್ನು ಯಾವ ದಿನಾಂಕದಿಂದು ಕೇಳಿರುತ್ತೇನೆ ಎಂದು ನೆನಪಿರುವುದಿಲ್ಲ. ಆದರೆ ಸೌತನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರ ಸಮಕ್ಷಮ ಕೇಳಿರುತ್ತೇನೆ. ದಾವಾ ಸ್ವತ್ತುಗಳಿಂದ ಅಂದಾಜು ವಾರ್ಷಿಕವಾಗಿ 5-6 ಲಕ್ಷ ಆದಾಯವಿದೆ. ಸದರಿ ಸ್ವತ್ತುಗಳಲ್ಲಿ ಭತ್ತ, ಅಡಿಕೆ ಮತ್ತು ತೆಂಗು ಬೆಳೆಯುತ್ತಾರೆ. ಬಾಳೆಯನ್ನು 2 ನೇ ಸ್ವತ್ತಿನಲ್ಲಿ ಬೆಳೆಯುತ್ತಾರೆ.

**13**. ಪ್ರತಿವಾದಿಗಳು ಜಮೀನಿನಲ್ಲಿ ಒಟ್ಟಿಗೆ ಬೆಳೆಯನ್ನು ಬೆಳೆಯುತ್ತಾರೆ ಅವರು 1991-92 ರಿಂದ ಪ್ರತ್ಯೇಕವಾಗಿ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾತ ತಮ್ಮಯ್ಯರವರಿಗೆ ಒಟ್ಟು 6 ಜನ ಮಕ್ಕಳು. 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಲ್ಲರಿಗೂ ಸಹ ಬೇರೆ ಕಡೆ ಜಮೀನು ಇದೆ.

14. ನಮ್ಮ ತಂದೆ ಬದುಕಿದ್ದಾಗಲೇ ದಾವಾ ಷೆಡ್ಯೂಲ್ ಸ್ವತ್ತು 1, 2 ಮತ್ತು 3 ಗಳನ್ನು ಸರ್ಕಾರಕ್ಕೆ ಅರ್ಜಿಯನ್ನು ನೀಡಿ ಖಾತೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೇ ನಂಬರ 52/2 ಎಂದು ತಪ್ಪಾಗಿ ನಮೂದು ಮಾಡಿದ್ದು ಅದರ ಸರಿಯಾದ ಸರ್ವೇ ನಂಬರ 52/3 ಎಂದರೆ ನನಗೆ ಗೊತ್ತಿಲ್ಲ. ಇನ್ನೊಂದು ಕಡೆ ಜಮೀನನ್ನು ನಾನೇ ಬಿಟ್ಟಿರುತ್ತೇನೆ. ಸದರಿ ಜಮೀನು 15-20 ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ.

**15.** ದಾವಾ 4 ನೇ ಐಟಂ ಉದ್ದೇಶ ಪೂರ್ವಕವಾಗಿ ತಪ್ಪಾಗಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತವಾಗಿದ್ದಾಗಲೇ 2003-04 ರಲ್ಲಿ ನಮ್ಮ ತಂದೆ ಅರ್ಜಿಯನ್ನು ನೀಡಿ ಖಾಖೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ನಮ್ಮ ತಂದೆಗೆ ಸೇರಿದ್ದಾಗಿ ಬರೆಸಿದ್ದೇನೇ ಎಂದರೆ ಸರಿ. ನಾನು ನಮ್ಮ ತಂದೆ ಬದುಕಿದ್ದಾಗ ದಾವಾ ಸ್ವತ್ತುಗಳು ಜಂಟಿ ಖಾತೆಯಲ್ಲಿದ್ದವು ಎಂದು ತಿಳಿಸಿರುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ